Other applications are still under process in the Zilla Parishad.

c) Kolar Zilla parishad has reported that beneficiaries are yet to receive financial assistance.

d) The Zilla parishad, Kolar has reported that identification of beneficiaries was delayed, as a result of which applications recommended to Banks were also delayed. No specific reports received from Zilla parishad, Kolar against the banks for delay in giving loans.However, non-co-operating by the banks is being tackled by the Government separately.

ಕುಡಿಯುವ ನೀರಿನ ಯೋಜನೆ

2971 - ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಭದ್ರಾ ನದಿಯಿಂದ ಕರೂರು, ಚಲಗೇರಿ ಮತ್ತು ಎಣ್ಣೆ ಹೊಸಹಳ್ಳಿ ಗ್ರಾಮಗಳಿಗೆ ನಳದ ನೀರು ಸರಬರಾಜು ಯೋಜನೆಗೆ ಮಂಜೂರು ಮಾಡಲು ಸರ್ಕಾರದ ಮುಂದೆ ಯಾವುದಾದರೂ ಮನವಿ ಇದೆಯೇ?*

ಆ) *ಒಂದು ಖಾಸಗಿ ಕಂಪನಿಯು ಈ ಯೋಜನೆಯ ಶೇಕಡ 50 ರಷ್ಟು ಖರ್ಚನ್ನು ವಹಿಸಿಕೊಳ್ಳಲು ಮುಂದೆ ಬಂದಿರುವುದು ಸರ್ಕಾರಕ್ಕೆ ತಿಳಿದಿರುವುದೇ?*

ಇ) *ಹಾಗಿದ್ದಲ್ಲಿ ಈ ಯೋಜನೆಯನ್ನು ಮಂಜೂರು ಮಾಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯಸಚಿವರು):

ಅ) ಹೌದು

ಆ) ಹೌದು

ಇ) ಯೋಜನೆಯು ಇನ್ನೂ ತನಿಖಾ ಹಂತದಲ್ಲಿದೆ.

ರಾಣೆಬೆನ್ನೂರು ತಾಲ್ಲೂಕು ಮೆಡ್ಲೇರಿ ಗ್ರಾಮದಲ್ಲಿ ಒಳಚರಂಡಿ ನಿರ್ಮಾ

2972 - ಶ್ರೀ ಕೆ.ಬಿ.ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ತಾಲ್ಲೂಕು ಮೆಡ್ಲೇರಿ ಗ್ರಾಮದಲ್ಲಿ ಒಳಚರಂಡಿ ನಿರ್ಮಾಣದ ಮನವಿ ಸರ್ಕಾರದ ಮುಂದೆ ಇದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರ ಈ ದಿಸೆಯಲ್ಲಿ ಜರುಗಿಸಿದ ಕ್ರಮ?*

ಇ) *ರಾಷ್ಟ್ರದ ದೊಡ್ಡ ಗ್ರಾಮಗಳಲ್ಲಿ ಎಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸಾಕಷ್ಟಿದೆ ಅಲ್ಲಿ ಒಳಚರಂಡಿ ವ್ಯವಸ್ಥೆ ಒದಗಿಸಲು ಸರ್ಕಾರ ಆಲೋಚಿಸುತ್ತಿದೆಯಾ?*

ಈ) *ಹಾಗಿದ್ದಲ್ಲಿ ಸರ್ಕಾರ ಈ ದಿಸೆಯಲ್ಲಿ ಜರುಗಿಸಿದ ಮೊದಲು ಮಾಡಿದ ಕ್ರಮವೇನು?*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಸಚಿವರು)

ಅ) ಹೌದು

ಅ) ಕೇಂದ್ರ ಸರ್ಕಾರದ ಮಾರ್ಗದರ್ಶನದ ಪ್ರಕಾರ 1,00,000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಹಳ್ಳಿಗಳು ಪಟ್ಟಣಗಳಿಗೆ ಮಾತ್ರ ಒಳಚರಂಡಿಯ ವ್ಯವಸ್ಥೆಯನ್ನು ಅಳವಡಿಸಬಹುದಾಗಿದೆ. ಮಡಲೇರಿ ಗ್ರಾಮಕ್ಕೆ ಜನಸಂಖ್ಯೆ 100000ಕ್ಕಿಂತ ಕಡಿಮೆ ಇರುವುದರಿಂದ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಡಕೇರಿಯಲ್ಲಿರುವ ಸರ್ಕಾರಿ ಆಸ್ಪತ್ರೆ ಕಟ್ಟಡ

3090 - ಶ್ರೀ ಡಿ.ಎ.ಚಿನ್ನಪ್ಪ (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಕೇರಿಯಲ್ಲಿ ಸರ್ಕಾರವು 1.40 ಕೋಟಿ ರೂ.ಗಳ ವೆಚ್ಚದಲ್ಲಿ ಹೊಸ ಆಸ್ಪತ್ರೆ ಕಟ್ಟಡವನ್ನು ಕಟ್ಟುತ್ತಿರುವುದು ನಿಜವೇ;

ಆ) ಈವರೆಗೆ ಖರ್ಚು ಮಾಡಿದ ಹಣ;

ಇ) ಕಟ್ಟುತ್ತಿರುವ ಕಟ್ಟಡವು ಈಗ ಯಾವ ಹಂತದಲ್ಲಿ ನಿಂತಿರುತ್ತದೆ;

ಈ) ಪರಿಷ್ಕೃತ ಅಂದಾಜಿನ ಮೊತ್ತ;

ಉ) ಕಟ್ಟಡದ ಕೆಲಸದ ಕಾರ್ಯನಿರ್ವಹಣೆಯು ನಿಧಾನವವಾಗುತ್ತಿರುವುದಕ್ಕೆ ಕಾರಣವೇನು;

ಊ) ಯಾವಾಗ್ಗೆ ಈ ಕಾರ್ಯವು ಪೂರ್ಣವಾಗುವ ಸಂಭವವಿದೆ;

ಋ) ಈ ವರ್ಷದಲ್ಲಿ ಒದಗಿಸಲಾದ ಹಣವೆಷ್ಟು;

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ನಿಜ.

ಆ) ೩೮ ಲಕ್ಷ ರೂ.ಗಳು.

ಇ) ಹೊರ ರೋಗಿ ಬ್ಲಾಕ್ ಕಟ್ಟಡದ ಕೆಲಸಗಳು ಸಂಪೂರ್ಣವಾಗಿ ಮುಗಿದಿದ್ದು ೧೯೮೯ರಿಂದೀಚೆಗೆ ಕಾರ್ಯಾಚರಣೆಯಲ್ಲಿದೆ.

ಈ) ಮೊದಲನೆ ಹಂತಕ್ಕೆ ೩೮ ಲಕ್ಷ.

ಉ) ಎರಡನೇ ಹಾಗೂ ಮೂರನೇ ಹಂತದ ಕಾಮಗಾರಿಯ ಅಯವ್ಯಯದ ಸೇರದೆ ಇರುವುದರ ಕಾರಣದಿಂದಾಗಿ.

ಊ) ಸಾಕಷ್ಟು ಹಣವನ್ನು ಒದಗಿಸುವ ಸಾಧ್ಯತೆಯ ಮೇರೆಗೆ ಮುಂಬರುವ ಸಾಲುಗಳಲ್ಲಿ.

ಋ) ಒದಗಿಸಿಲ್ಲ.

ಹಲಗಾ ಗ್ರಾಮದ ಏತ ನೀರಾವರಿ ಯೋಜನೆಯ 2ನೇಹಂತದ ಕೆಲಸ

3086 - ಶ್ರೀ ಕೆ.ಸಿ.ಮೋಡಗೆಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಲಗಾ ಗ್ರಾಮದ ಏತನೀರಾವರಿ ಯೋಜನೆಯ 2ನೇ ಹಂತದ ಕೆಲಸವನ್ನು ಇನ್ನೂ ಪ್ರಾರಂಭಿಸದಿರುವುದಕ್ಕೆ ಕಾರಣವೇನು?

ಆ) ಬೆಳಗಾವಿ ತಾಲ್ಲೂಕಿನ ಹಲಗಾ ಗ್ರಾಮದ ಏತನೀರಾವರಿ ಯೋಜನೆಯ 2ನೇ ಹಂತದ ಕೆಲಸ ಪ್ರಾರಂಭಿಸುವ ಸಂಭವನೀಯ ದಿನಾಂಕ ಯಾವುದು.